

# ಸ್ವಾಲೊ ಹಕ್ಕಿಯ ಸಂಸಾರ



■ ಚಿತ್ರ– ಬರಹ
**ಗಣಂಗೂರು ನಂಜೇಗೌಡ**

ಸ್ವಾಲೊ ಹಕ್ಕಿಗಳು ಗುಬ್ಬಚ್ಚಿ ಆಕಾರದ ಪುಟ್ಟ ಪಕ್ಷಿ ಸಂಕುಲ. ನೋಡಲು ಗುಬ್ಬಚ್ಚಿಗಳಿಗಿಂತಲೂ ಸುಂದರ. ಚಲನವಲನದಲ್ಲಂತೂ  ಗುಬ್ಬಚ್ಚಿಗಿಂತ ಚುರುಕು. ಶರವೇಗದಲ್ಲಿ ಗಗನದೆಡೆಗೆ ಹಾರುವ ಛಾತಿಯುಳ್ಳ ಈ ಅತ್ಯಂತ ಪುಟ್ಟ ಹಕ್ಕಿಗಳನ್ನು ಸರಿಯಾಗಿ ನೋಡಬೇಕಾದರೆ ಗಂಟೆಗಟ್ಟಲೆ ಕಾಯುವಷ್ಟು ತಾಳ್ಮೆ ಇರಬೇಕು.

ರಂಗನತಿಟ್ಟು ಪಕ್ಷಿಧಾಮದಲ್ಲಿ ನದಿಯ ಮಧ್ಯೆ ನೀರಿಗೆ ಅಡ್ಡಲಾಗಿ ಚಾಚಿ ಮಲಗಿದ ಎರಡು ಬಂಡೆಗಳ ಕೆಳಗೆ ಈ ಸ್ವಾಲೊ ಹಕ್ಕಿಗಳ ನೂರಾರು ಸಂಸಾರಗಳಿವೆ! ಬಂಡೆಯ ಕೆಳಗೆ, (ನೂರಾರು ಅಪಾರ್ಟ್‌ಮೆಂಟ್‌ಗಳ ಮಾದರಿಯಲ್ಲಿ) ಈ ಹಕ್ಕಿಗಳ ಸಾಲು ಸಾಲು ಮಣ್ಣಿನ ಗೂಡುಗಳು ಕಾಣಿಸುತ್ತವೆ. (ಸಾಮಾನ್ಯವಾಗಿ ಪ್ರವಾಸಿಗರನ್ನು ದೋಣಿಯಲ್ಲಿ ಕರೆದೊಯ್ಯುವಾಗ ಈ ಬಂಡೆಯ ತುದಿವರೆಗೆ ಕರೆದೊಯ್ಯುವುದಿಲ್ಲ.)

**(8ನೇ ಪುಟ ನೋಡಿ)**